ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮೂರು ದಿವಸಗಳ ಕೆಳಗೆ ಮೈಸೂರಿನ ರಾಯನಕೆರೆಯ ಪ್ರಕರಣ, ರಾಜಮಹಲ್‌ನಲ್ಲಿ ಕೆಲವು ನಿವೇಶನಗಳ ಪ್ರಕರಣದ ಬಗ್ಗೆ ಎರಡೂವರೆ ಗಂಟೆಗಳ ಕಾಲದ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿದ್ದೆನು. ಚರ್ಚೆ ಮಾಡುವುದಕ್ಕೆ ಮುಂದೆ ಅವುಗಳಿಗೆ ಹಣ ಕೊಟ್ಟರೆ ಚರ್ಚೆ ಮಾಡುವುದಕ್ಕೆ ನಮಗೆ ಕಷ್ಟವಾಗುತ್ತದೆ. ಆದ್ದರಿಂದ ಶೀಘ್ರವಾಗಿ ಇದನ್ನು ಚರ್ಚೆಗೆ ತೆಗೆದುಕೊಂಡರೆ ಅನುಕೂಲವಾಗುತ್ತದೆ, ಲಕ್ಷಾಂತರ ರೂಪಾಯಿ ವ್ಯವಹಾರ ಇವರಲ್ಲಿ ಸೇರಿದೆ. ಇದು ಮಾಜಿ ಮಹಾರಾಜರಿಗೆ ಸೇರಿರುವ ಆಸ್ತಿಯ ಬಗ್ಗೆ ಇದೆ.

ಅಧ್ಯಕ್ಷರು.—ಅದನ್ನು ಮಿನಿಸ್ಟರ್ ಅವರಿಗೆ ಕಳುಹಿಸಿದ್ದೇವೆ, ಮಿನಿಸ್ಟರ್ ರವರು ಬಂದಾಗ ಮಾನ್ಯ ಸದಸ್ಯರು ಉತ್ತರವನ್ನು ಪಡೆಯ ಬಹುದು.

MATTERS UNDER RULE 312

(i) *Conflicting Statements by the Minister in Respect of Mahatma Gandhi*

SRI C.M. ARUMUGHAM (K.G.F.).—I want to know whether there is harmony and unity in the present Cabinet. The Minister of State for Major Irrigation Sri H. N. Nanje Gowda stated in a meeting at Mysore on the 4th instant that people who have not studied properly the work of Mahatma Gandhi.....

MADAM SPEAKER.—The hon. member has not given notice of it. Some other hon. Members have given notice of this and let them raise it.

ಶ್ರೀ ಎಚ್.ಎಸ್. ಸಿದ್ದಪ್ಪ (ಅರಸೀಕೆರೆ).—ಮಾನ್ಯ ಸಭಾಧ್ಯಕ್ಷಣೀ ಯವರೇ, ಈ ರಾಜ್ಯದ ಮಂತ್ರಿಗಳಲ್ಲಿ ಒಬ್ಬೊಬ್ಬರು ಒಂದೇ ವಿಷಯದ ಬಗ್ಗೆ ತಮ್ಮ ತಮ್ಮ ಅಭಿಪ್ರಾಯವನ್ನು ವಿಧವಿಧವಾಗಿ ಕೊಡುತ್ತಾ ಇದ್ದಾರೆ. ಉದಾಹರಣೆಗೆ ಹೇಳುವುದಾದರೆ ಮಹಾತ್ಮಗಾಂಧಿಯವರ ಬಗ್ಗೆ," ಶ್ರೀಮಾನ್ ಬಸವಲಿಂಗಪ್ಪನವರು ಮೈಸೂರಿನ ಮಾನಸಗಂಗೋತ್ರಿಯಲ್ಲಿ ಮಾತನಾಡುತ್ತಾ, ಗಾಂಧೀಜಿಯವರ ಬಗ್ಗೆ ಅಲ್ಲಗಳೆದುದ್ದನ್ನು ಈ ಸದನದಲ್ಲಿ ಮೊದಲೆ ತಂದಿದ್ದೇವೆ ಆದಾದನಂತರ ನಂಜೇಗೌಡರು ಮಾತನಾಡುತ್ತಾ ಹೇಳಿದ್ದಾರೆ, ಗಾಂಧೀಜಿಯವರ ಬಗ್ಗೆ ಪೂರ್ಣ ಅರಿವು ಮಾಡಿಕೊಳ್ಳದೆ, ಅವರ ತತ್ವ, ಧ್ಯೇಯ ಧೋರಣೆಗಳನ್ನು ತಿಳಿದು ಕೊಳ್ಳದೆ ಈ ರೀತಿ ಮಾತನಾಡುವುದು ಸರಿಯಲ್ಲ, ಆ ರೀತಿ ಮಾತನಾಡುವುದಾದರೆ, ಕಂಡಂಡ ಆನೆಯನ್ನೆಲ್ಲಾ ಇರುವೆ ಒಡಲು ಹೇಗೆ ಭಾವಿಸುತ್ತಾನೆಯೋ ಹಾಗೆ ಗಾಂಧೀಜಿಯ ಬಗ್ಗೆ ಮಂತ್ರಿಗಳಾಗಲೀ, ಯಾರೇ ಆಗಲೀ ಈ ರೀತಿಯಾಗಿ ಅನಾದರಣೀಯವಾಗಿ ಕಾಡುವುದು ಸರಿಯಲ್ಲ, ಒಳ್ಳೆಯದಲ್ಲ ಎಂದು ಮಾನ್ಯ ನಂಜೇಗೌಡರು ಹೇಳಿಕೆಯನ್ನು ಕೂಟ್ಟಿದ್ದಾರೆ. ಲೆಜಿಸ್ಲೇಟೀವ್ ಕೌನ್ಸಿಲ್‌ನಲ್ಲಿ ಮಾನ್ಯ ರಾಚಯ್ಯನವರು ಮಾತನಾಡುತ್ತಾ, ಆ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದು ಏನು ತೋರಿಸುತ್ತದೆ ಎಂದರೆ ಮಂತ್ರಿಗಳಲ್ಲಿ ನೀತಿ, ನಿಯಮ, ದೋರಣೆ ಒಂದೇ ಸಮನಾದ ರೀತಿ ಇಲ್ಲ, ಒಬ್ಬೊಬ್ಬರು ಮಂತ್ರಿಗಳು ತಮಗೆ ತಿಳಿದಹಾಗೆ ನೀತಿ ನಿರೂಪಣೆಯನ್ನು ರೂಪಿಸುವುದು, ಇನ್ನೊಬ್ಬ ಮಂತ್ರಿಗಳು ಇನ್ನೊಂದು ದಾರಿಯನ್ನು ಅವಲಂಬಿಸುವುದು ಹೀಗಾದರೆ ದೇಶ ಯಾವ ಹಾದಿಯಲ್ಲಿ ಹೋಗಬೇಕು ? ಯಾವ ಹಾದಿಯನ್ನು ಅನುಸರಿಸಬೇಕು ? ದೇಶದ ನೀತಿ ಏನು ಎನ್ನುವ ಬಗ್ಗೆ ಸ್ಪಷ್ಟ ನೀತಿಯನ್ನು ನಿರೂಪಣೆ ಮಾಡಿ ಜನತೆಗೆ ಮಾರ್ಗದರ್ಶನ ಮಾಡುವುದರಲ್ಲಿ ಈ ಸರ್ಕಾರವಿಫಲವಾಗಿದೆ. ನಾನು ಸರ್ಕಾರಕ್ಕೆ ಕೇಳುತ್ತೇನೆ ಗಾಂಧೀಜಿಯವರ ಆದರ್ಶಗಳ ಬಗ್ಗೆ ತತ್ವದ ಬಗ್ಗೆ ತಮ್ಮ ನಿಲುವು ಏನು, ನೀತಿ ಏನು ಎನ್ನುವುದನ್ನು ಸ್ಪಷ್ಟಮಾಡಬೇಕು.

Transaction of properties at Rayanakere and Rajmahal, Mysore.